International Journal of Kannada Research 2024; 10(3): 83-86

International Journal of Kannada Research
www.kannadajournal.com

**ISSN: 2454–5813**
IJKR 2024; 10(3): 83-86
© 2024 IJKR
www.kannadajournal.com
Received: 06-05-2024
Accepted: 10-06-2024

**ಡಾ.ಶ್ರೀಧರ ಎನ್**
ಸಹಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು, ಅಂಚೆ ವಿದ್ಯಾನಗರ, ಕಾಸರಗೋಡು ಜಿಲ್ಲೆ, ಕೇರಳ, ಭಾರತ

**Corresponding Author:**
**ಡಾ.ಶ್ರೀಧರ ಎನ್**
ಸಹಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು, ಅಂಚೆ ವಿದ್ಯಾನಗರ, ಕಾಸರಗೋಡು ಜಿಲ್ಲೆ, ಕೇರಳ, ಭಾರತ

# ಜನ್ನ: ವಿಷಮ ಪ್ರಣಯದ ಎರಡು ಮುಖಗಳು

**ಡಾ.ಶ್ರೀಧರ ಎನ್**

**DOI:** https://doi.org/10.22271/24545813.2024.v10.i3b.1016

**ಪೀಠಿಕೆ**

ಪ್ರಾಚೀನ ಕನ್ನಡ ಜೈನ ಸಾಹಿತ್ಯ ಪರಂಪರೆಯಲ್ಲಿ ಪಂಪ, ಪೊನ್ನ, ರನ್ನ ಮೊದಲಾದ ಕವಿಗಳ ನಂತರ ಬಂದ ಜನ್ನ ಕವಿ ಚಂಪೂ ಯುಗದ ಲೌಕಿಕ ಮತ್ತು ಆಗಮಿಕ ಕಾವ್ಯ ಎಂಬ ಸಿದ್ಧ ಮಾದರಿಯನ್ನು ಮುರಿದು ಹೊಸ ಮಾರ್ಗವೊಂದನ್ನು ರೂಪಿಸಿದವನು. ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ ಎರಡು ಕಾವ್ಯಗಳಲ್ಲೂ ಅವನು ಧಾರ್ಮಿಕ ವಸ್ತುವನ್ನು ನಿರ್ವಹಿಸಿದ್ದಾನೆ. 'ಅನುಭವ ಮುಕುರ'ವೆಂಬ ಕಾಮಶಾಸ್ತ್ರ ಸಂಬಂಧಿಯಾದ ಕೃತಿಯನ್ನೂ, ತರೀಕೆರೆ ಮತ್ತು ಚನ್ನರಾಯಪಟ್ಟಣದಲ್ಲಿ ದೊರಕಿರುವ ಎರಡು ಶಾಸನಗಳನ್ನೂ ಜನ್ನ ರಚಿಸಿದ್ದಾನೆ. ಜೈನ ಮತಕ್ಕೆ ಸೇರಿದ ಕಮ್ಮೆ ವಂಶದ ಕಾಶ್ಯಪ ಗೋತ್ರದ ದೊಡ್ಡ ಮನೆತನಕ್ಕೆ ಸೇರಿದ ಜನ್ನನ ತಂದೆ ಯಾದವ ಕಟಕಾಚಾರ್ಯನೆನಿಸಿದ ಶಂಕರ ಸುಮನೋಬಾಣ. ತಾಯಿ ಗಂಗಾದೇವಿ. ಪತ್ನಿಯ ಹೆಸರು ಲಕುಮಾದೇವಿ. ರಾಮಚಂದ್ರ ಮುನೀಂದ್ರರು ಜನ್ನನ ಗುರುಗಳು. ಹೊಯ್ಸಳ ವಂಶದ ವೀರ ಬಲ್ಲಾಳ ಮತ್ತು ಅವನ ಮಗ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಅವನು ಕವಿಯೂ ಕಲಿಯೂ ಆಗಿದ್ದನು. ಕವಿಚಕ್ರವರ್ತಿ, ಕವಿ ಭಾಳಲೋಚನ ಅವನ ಬಿರುದುಗಳು. ಇತರ ಕವಿಗಳಿಗಿಂತ ಭಿನ್ನವಾಗಿ ಅವನು ತನ್ನ ವೃತ್ತಾಂತವನ್ನು ಎರಡು ಕೃತಿಗಳಲ್ಲಿ ತಕ್ಕಮಟ್ಟಿಗೆ ಹೇಳಿಕೊಂಡಿದ್ದಾನೆ.

ಯಶೋಧರ ಚರಿತೆಯು ಧಾರ್ಮಿಕ ಕಾವ್ಯವಾದರೂ ಅದು ಸಾಂಪ್ರದಾಯಿಕ ಜೈನ ಪುರಾಣ ಕಾವ್ಯವಲ್ಲ. ಅದರ ನಾಯಕ ಲೋಕೋತ್ತರನಾದ ತೀರ್ಥಂಕರನಲ್ಲ. ಹೀಗಾಗಿ ಜೈನ ಪುರಾಣ ಕಾವ್ಯಗಳಲ್ಲಿ ಕಾಣುವ ಜಟಿಲ ಮತೀಯ ವಿವರಣೆಗಳು ಕಾವ್ಯದಲ್ಲಿ ಬಂದಿಲ್ಲ. ಕೇವಲ ನಾಲ್ಕು ಅವತಾರಗಳಲ್ಲಿ ರಚಿಸಿದ ಕಾವ್ಯದಲ್ಲಿ ಕವಿ ಆದರ್ಶವನ್ನು ಮೆರೆದಿದ್ದಾನೆ. ಕಥೆಯನ್ನು ಹೇಳುವ ಕಲೆಗಾರಿಕೆ, ಭವಾವಳಿಯ ವರ್ಣನೆ, ದೇಸಿಯ ಬಳಕೆ, ತಿಳಿಯಾದ ಶೈಲಿಯ ಧರ್ಮ ನಿರೂಪಣೆಗಳಿಂದ ಯಶೋಧರ ಚರಿತೆ ಉತ್ತಮ ಕಾವ್ಯವಾಗಿ ರೂಪುಗೊಂಡಿದೆ. ಅನಂತನಾಥ ಪುರಾಣವು ಹದಿನಾಲ್ಕನೇ ತೀರ್ಥಂಕರನಾದ ಅನಂತನಾಥನ ಕಥೆಯನ್ನು ವಸ್ತುವಾಗಿ ಉಳ್ಳ ಹದಿನಾಲ್ಕು ಆಶ್ವಾಸಗಳ ಪ್ರೌಢ ಚಂಪೂ ಕಾವ್ಯ. ಸಂಪ್ರದಾಯದಂತೆ ಅದರಲ್ಲಿ ಬಲದೇವ ವಾಸುದೇವರ ಕಥೆಯೂ ಸೇರಿಕೊಂಡಿದೆ. ಇದರ ರಚನೆಯಲ್ಲಿ ಮಹಾಕಾವ್ಯದ ಶಾಸ್ತ್ರೋಕ್ತ ಲಕ್ಷಣಗಳನ್ನು ಕವಿ ನಿಷ್ಠೆಯಿಂದ ಅನುಸರಿಸಿದ್ದಾನೆ. ಮಹಾಕಾವ್ಯದ ಅಷ್ಟಾದಶ ವರ್ಣನೆಗಳು ಇದರಲ್ಲಿ ಅನಿವಾರ್ಯವೆಂಬಂತೆ ಸೇರಿಕೊಂಡಿವೆ. ಪಂಚಕಲ್ಯಾಣಗಳು, ಅನಂತವ್ರತ ಮೊದಲಾದ ಮತೀಯ ಪ್ರಕ್ರಿಯೆಗಳು ತುಂಬಿಕೊಂಡು ಕಾವ್ಯ ಜಾಳಾಗಿದೆ. ಶೃಂಗಾರದ ಅತಿರೇಕ, ಸಂಸ್ಕೃತಭೂಯಿಷ್ಠ ಶೈಲಿ, ಸಂಪ್ರದಾಯ ಶರಣತೆಗಳಿಂದ ಕೂಡಿ ಕೃತಿ ಜೈನ ಪುರಾಣವಾಗಿದೆಯೇ ಹೊರತು ಕಾವ್ಯವಾಗಲಿಲ್ಲ. ಆದರೆ ಕಾವ್ಯದಲ್ಲಿ ಬರುವ ಚಂಡಶಾಸನನ ಪ್ರಸಂಗ ಅತ್ಯಂತ ಸುಂದರವಾದ ಭಾಗ. ಕಾವ್ಯದ ಗಾತ್ರಕ್ಕೆ ಹೋಲಿಸಿದರೆ ಇದು ಸಣ್ಣ ಭಾಗವಾದರೂ ಕಾವ್ಯಗುಣದ ದೃಷ್ಟಿಯಿಂದ ಉತ್ತಮವಾಗಿದೆ.

ಜನ್ನಕವಿ ಆರಿಸಿಕೊಂಡದ್ದು ಧರ್ಮ ಸಂಬಂಧಿಯಾದ ವಸ್ತುವಾದರೂ ಯಶೋಧರ ಚರಿತೆಯ ಅಷ್ಟಾವಂಕ ಮತ್ತು ಅಮೃತಮತಿಯರ ಪ್ರಣಯ ಮತ್ತು ಅನಂತನಾಥ ಪುರಾಣದಲ್ಲಿ ಚಂಡಶಾಸನ ಮತ್ತು ಸುನಂದೆಯ ಪ್ರಣಯಗಳ ಎರಡು ಲೌಕಿಕ ಪ್ರಸಂಗಗಳು ಎರಡೂ ಕಾವ್ಯಗಳ ಕೇಂದ್ರದಲ್ಲಿವೆ. ಜನ್ನ ತನ್ನ ಎರಡೂ ಕಾವ್ಯಗಳಲ್ಲಿ ವಿವಾಹ ಬಾಹಿರ ಪ್ರಣಯ ಸಮಸ್ಯೆಗಳನ್ನು ಚಿತ್ರಿಸಿದ್ದಾನೆ. ಒಂದರಲ್ಲಿ ಗಂಡನನ್ನು ಬಿಟ್ಟು ಪರಪುರುಷನನ್ನು ಸೇರಿಕೊಳ್ಳುವ ಅಮೃತಮತಿಯ ಉತ್ಕಟವಾದ ಪ್ರಣಯದ

ಸ್ತ್ರೀಮುಖವಿದ್ದರೆ, ಇನ್ನೊಂದರಲ್ಲಿ ಪ್ರಿಯ ಗೆಳೆಯನ ಪತ್ನಿಯನ್ನೇ ಅಪಹರಿಸಿದ ಚಂಡಶಾಸನನ ತೀವ್ರತಮ ಪ್ರಣಯದ ಪುರುಷ ಮುಖವನ್ನು ಚಿತ್ರಿಸಿದ್ದಾನೆ. ಎರಡೂ ಕಾವ್ಯಗಳಲ್ಲಿ ಪ್ರಣಯದ ಅತಿರೇಕವಿದೆ. ಹೀಗೆ ಗಂಡು ಮತ್ತು ಹೆಣ್ಣಿನ ವಿಷಮ ಪ್ರಣಯದ ಎರಡು ಮುಖಗಳನ್ನು ಚಿತ್ರಿಸಿದ ಜನ್ನಕವಿಯು ಮನುಷ್ಯನ ಮೂಲಭೂತ ಪ್ರವೃತ್ತಿಯ ಕುರಿತ ಚರ್ಚೆಗೆ ಕಾರಣನಾಗಿದ್ದಾನೆ.

**ಅಮೃತಮತಿ ಮತ್ತು ಅಷ್ಟಾವಂಕ**

ಜನ್ನನ ಯಶೋಧರ ಚರಿತೆಯು 'ಅಭಯರುಚಿ ಕುಮಾರಂ ಮಾರಿದತ್ತಂಗೆ ಹಿಂಸಾರಭಸಮತಿಗೆ ಸಯ್ಪಿಂ ಪೇಟ್ದು ಧರ್ಮಕ್ಕೆ ತಂದ ಶುಭ ಕಥನ.' ಅಮೃತಮತಿಯ ಪ್ರಣಯ ಕಥೆ ಅದರ ತಿರುಳಿನಂತೆ ಭಾಸವಾದರೂ, ಕವಿಯ ಕಾವ್ಯೋದ್ದೇಶದ ದೃಷ್ಟಿಯಿಂದ ಅದು ಗೌಣ. ಜನ್ನನ ನೇರವಾದ ಉದ್ದೇಶ 'ಜೀವದಯೆ ಜೈನಧರ್ಮಂ' ಎಂಬುದರ ಪ್ರತಿಪಾದನೆಯಾಗಿದೆ. ಅಹಿಂಸೆಯ ಮಹಿಮೆಯನ್ನೂ, ಹಿಂಸೆಯ ದುರಂತವನ್ನೂ ಕವಿ ತನ್ನ ಕಾವ್ಯದಲ್ಲಿ ಚಿತ್ರಿಸಬಯಸಿದ್ದಾನೆ. ಹಿಂಸೆ ಮತ್ತು ಅಹಿಂಸೆಗಳ ಸಂಘರ್ಷದಲ್ಲಿ ಹಿಂಸೆಗೆ ಸೋಲಾಗುತ್ತದೆ; ಅಹಿಂಸೆ ಗೆಲ್ಲುತ್ತದೆ. ಯಶೋಧರ ಮತ್ತು ಚಂದ್ರಮತಿಯರ ಕಥೆಯಲ್ಲಿ ಹಿಂಸೆಯ ಪರಿಣಾಮವನ್ನು ಅವನು ಸಮರ್ಥವಾಗಿ ಹೇಳಿದ್ದಾನೆ. ತಾಯಿ ಮತ್ತು ಮಗ ಸೇರಿ ಒಂದು ಹಿಟ್ಟಿನ ಕೋಳಿಯನ್ನು ಬಲಿಗೊಟ್ಟ ಸಂಕಲ್ಪ ಹಿಂಸೆ ಮಾತ್ರದಿಂದ ಅವರು ಆರು ತಿರ್ಯಕ್ ಜನ್ಮಗಳನ್ನೆತ್ತಿ ತೊಳಲಾಡಬೇಕಾಯಿತು. ಮಾರಿದತ್ತನ ವೃತ್ತಾಂತದಲ್ಲಿ ಅಹಿಂಸೆಗೆ ಅಂತಿಮ ಜಯ ಎಂದು ಕವಿ ಸಾರಿದ್ದಾನೆ. ಹಿಂಸೆಯ ಪ್ರತಿರೂಪದಂತಿದ್ದ ಮಾರಿದತ್ತ, ಅಹಿಂಸೆಯೇ ಮೂರ್ತಿವೆತ್ತಂತೆ ಬಂದ ಅಭಯರುಚಿ ಮತ್ತು ಅಭಯಮತಿಯರ ಅಚಲ ಧೈರ್ಯವನ್ನು ಕಂಡು, ಅವರು ಪೂರ್ವಜನ್ಮಗಳ ಕಥೆಯನ್ನು ತಿಳಿದು ಸಂಪೂರ್ಣವಾಗಿ ಪರಿವರ್ತನೆಯನ್ನು ಹೊಂದಿದ. ಹಿಂಸೆಯ ಮೂರ್ತಿಯಾಗಿದ್ದ ಮಾರಿದೇವತೆಯು ಕೂಡ ಕೊನೆಗೆ ಸಾತ್ವಿಕೆಯಾದ ಶಿವೆಯಾದಳು. 'ಧರ್ಮದಿಂದಾಗದುದೇಂ?' ಎಂಬ ಪ್ರಶ್ನೆಯಲ್ಲಿ ಅವನ ಕಾವ್ಯೋದ್ದೇಶವೆಲ್ಲ ಅಡಗಿದೆ. ತನ್ನ ಕಾವ್ಯೋದ್ದೇಶದ ಈಡೇರಿಕೆಗಾಗಿಯೇ ಕವಿ ಅಮೃತಮತಿ ಮತ್ತು ಅಷ್ಟಾವಂಕರ ಪ್ರಣಯವನ್ನು ತೀವ್ರವಾಗಿ ಚಿತ್ರಿಸಿದ್ದಾನೆ ಎನಿಸುತ್ತದೆ. ಆದರೆ ಅಮೃತಮತಿಯ ಮನೋವ್ಯಾಪಾರವನ್ನು ಚಿತ್ರಿಸುವಲ್ಲಿ ಕವಿ ತಾಳಿರುವ ಮೌನ ಸಹೃದಯರ ಅನೇಕ ಜಿಜ್ಞಾಸೆಗಳಿಗೆ ಕಾರಣವಾಗಿದೆ.

ಕಬ್ಬಿನ ಬಿಲ್ಲಿಗೂ ನನೆಯ ನಾರಿಗೂ ಜನಮೋಹನ ಬಾಣವು ಹುಟ್ಟುವಂತೆ ಯಶೋಧರನು ಜನಿಸಿದನು. ಎಳೆಯ ಬೆಳ್ದಿಂಗಳು, ಪುಷ್ಪಬಾಣ, ಮಲಯ ಮಾರುತಗಳ ಸೌಂದರ್ಯವನ್ನು ಹೊಂದಿದ ಅವನ 'ಅಸಿಲತೆ ರಣಧೌತ'ವಾಗಿತ್ತು. ಇಂಥ ಯಶೋಧರನ ಮನಃಪ್ರಿಯೆ ಅಮೃತಮತಿ. ಆದರೆ ಅಮೃತಮತಿಗೆ ಯಶೋಧರನು ಮನಃಪ್ರಿಯನಾಗಿದ್ದನೇ? ಕವಿಯ ಮೌನ ಇಲ್ಲಿಂದ ಆರಂಭವಾಗುತ್ತದೆ.

> ಅಮೃತಮತಿ ಗಡ ಯಶೋಧರ
> ನ ಮನಃಪ್ರಿಯೆಯಾಕೆ ದೀವಮಾಗೆ ಪುಳಿಂದಂ
> ಸುಮನೋಬಾಣಂ ತದ್ಭೂ
> ರಮಣನನೊಲಿದಂತೆ ಗೋರಿಗೊಳಿಸುತ್ತಿರ್ಕುಂ
>
> (ಯಶೋಧರ ಚರಿತೆ, 2–6)

ಅಂದರೆ ಅಮೃತಮತಿಯನ್ನು ದೀವದ ಮೃಗವನ್ನಾಗಿ ಮಾಡಿಕೊಂಡು ಮನ್ಮಥನೆಂಬ ಬೇಡ ಯಶೋಧರನ್ನು ಆಕರ್ಷಿಸುತ್ತಿದ್ದ.

ಒಂದು ದಿವಸ ರಾತ್ರಿ ಯಶೋಧರ ಮತ್ತು ಅಮೃತಮತಿ ಸುರತ ಸುಖವನ್ನು ಅನುಭವಿಸಿ ನಿದ್ರಾಪರವಶರಾಗಿದ್ದ ಹೊತ್ತಿನಲ್ಲಿ ಗರಟಗೆಯ ಜಾವದುಕ್ಕಡದುಲಿ ನಿಂತ ಹೊತ್ತಿನಲ್ಲಿ ಅರಮನೆಯ ಪಕ್ಕದಲ್ಲಿ ವಾಸಿಸುತ್ತಿದ್ದ ಪಟ್ಟದಾನೆಯ ಮಾವುತ ವಿನೋದಕ್ಕೆ ಹಾಡತೊಡಗಿದ. ಆ ಹಾಡಿನಿಂದ ಅಮೃತಮತಿಯ ನಿದ್ದೆ ತಿಳಿಯಿತು. ಅವಳು ಹಾಡಿನ ದನಿಯನ್ನು ಆಲಿಸಿ 'ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್.' ಆ ನೂತನ ಗೀತದಿಂದ ಮನಸ್ಸು ಕದಡಿ ಹೋದ ಅಮೃತಮತಿಗೆ ಅವನನ್ನು ನೋಡುವ ಕೂಡುವ ಚಿಂತೆ ಕಡಲ್ವರಿಯಿತು. ಬೆಳಗಾದ ಕೂಡಲೇ ಅವಳು ತನ್ನ ನೆಚ್ಚಿನ ಕೆಳದಿಯನ್ನು ಕರೆದು ಮಾವಟಿಗನ ಬಳಿಗೆ ಕಳುಹಿಸಿದಳು. ಅಮೃತಮತಿಯ ಕೆಳದಿ ಆ ರೂಪಾಧಮನನ್ನು ಕಂಡು ಹೇಸಿ ಅವನ ರೂಕ್ಷವಾದ ರೂಪವನ್ನು ವರ್ಣಿಸಿದಳು. ತನ್ನ ಪ್ರಿಯಕರ ರೂಪವಿಲ್ಲದವನೆಂದು ತಿಳಿದರೂ, ಗದ್ಗದೆಕಂಠೆಯಾಗಿ ಕಂಬನಿದುಂಬಿ 'ಪುಳಿಂದನ ಕಣೆಗಟ್ಟಿ ನಿಂದ ವನಹರಿಣಿಯವೊಲ್' ಅವಳು ಇಂತೆಂದಳು. 'ಒಲವಾದೊಡೆ ರೂಪಿನ ಕೋಟಲೆಯೇವುದೋ, ಪೊಲ್ಲಮೆಯೆ ಲೇಸು ನಲ್ಲರ ಮೈಯೊಳ್'. ಅಮೃತಮತಿಯ ಈ ಮಾತುಗಳಿಂದಲೂ ಅವಳಿಗೆ ಯಶೋಧರನ ರೂಪಿನಲ್ಲಿ ಒಲವಿರಲಿಲ್ಲ ಎಂದು ತಿಳಿಯುತ್ತದೆ.

ಅಮೃತಮತಿ ಕೆಳದಿಯ ನೆರವಿನಿಂದ ಅಷ್ಟಾವಂಕನನ್ನು ಕೂಡಿದಳು. ಹಗಲಿರುಳು ರಾಜನ ಕಣ್ಣು ತಪ್ಪಿಸಿ ಅವನೊಡನೆ ಸುಖಿಸುತ್ತಿದ್ದಳು. 'ಬೇವಂ ಮೆಚ್ಚಿದ ಕಾಗೆಗೆ ಮಾವಿಳಿದಪ್ಪಂತೆ' ಗಂಡನಾದ ಯಶೋಧರನಲ್ಲಿ ಅವಳ ಒಲವು ಕುಗ್ಗಿತು. ಅವಳ ನಡತೆಯಲ್ಲಿ ಆದ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದ ಯಶೋಧರ ಒಂದು ದಿವಸ ರಾತ್ರಿ ಶಯ್ಯೆಯಲ್ಲಿ ನಿದ್ದೆ ಹೋದವನಂತೆ ನಟಿಸಿದ. ಮಧ್ಯರಾತ್ರಿ ಅಮೃತಮತಿ ಅವನ ತೋಳ ಸೆರೆಯಿಂದ ಬಿಡಿಸಿಕೊಂಡು ಜಾರನ ಬಳಿಗೆ ಹೋದಳು. ಅರಸ ಕತ್ತಿಯನ್ನು ಹಿರಿದು ಅವಳ ಹಿಂದೆಯೇ ನಡೆದ. ತಡವಾಗಿ ಬಂದ ಅರಸಿಯನ್ನು ಕಂಡು ಮುಳಿದ ಅಷ್ಟಾವಂಕ ಅವಳು ತಂದ ಗಂಧಮಾಲ್ಯಗಳನ್ನು ಕಿತ್ತೆಸೆದು, ಅವಳ ಕುರುಳು ಹಿಡಿದೆಳೆದು 'ಕಳಹಂಸೆಗೆ ಗಿಡುಗನೆರಗುವಂತೆ' ಚಾಟಿಯಿಂದ ಹೊಡೆದ; ಕಾಲಿನಿಂದ ಒದೆದ. ಅಮೃತಮತಿ ಅವನ ಕಾಲಿಗೆ ಬಿದ್ದು 'ಕೇರೆ ಪೊರಳ್ವಂತೆ' ಹೊರಳಾಡಿದಳು. ಅವಳಿಗೆ ಯಶೋಧರನು 'ಅರಸೆಂಬ ಪಾತಕ'ನಾಗಿದ್ದಾನೆ. ಅಷ್ಟಾವಂಕ 'ಗಜವೆಡಂಗ'ನಾಗಿದ್ದಾನೆ. 'ನಿನ್ನ ಉಳಿದೊಡೆ ಸಾವವಳ್ ಎನಗೆ ಮಿಕ್ಕ ಗಂಡರ್ ಸವಸೋದರರ್' ಎಂದು ಅವನಿಗೆ ನಂಬುಗೆಗೊಟ್ಟಳು. ಇದನ್ನೆಲ್ಲ ನೋಡುತ್ತಿದ್ದ ಅರಸನ ಕೈಯ 'ಬಾಳ್ ನಿಮಿರ್ದುದು; ತೋಳ್ ತೂಗಿದುದು, ಮನಂ ಕನಲ್ದುದು, ಇರ್ವರನ್ ಎರಟ್ಬಾಗಂ ಮಾಡಲು ಧೃತಿ'ಯಾದರೂ, ಕೊಲೆಗೆ ಹೇಸಿ ಇರಿಯಲೊಲ್ಲದೆ ಮುನ್ನಿನಂತೆ ಬಂದು ಮಲಗಿಕೊಂಡ.

ಮರುದಿವಸ ಮಗನ ಕಾಂತಿಹೀನವಾದ ಮುಖವನ್ನು ಕಂಡು ತಾಯಿ ಚಂದ್ರಮತಿ ಕಾರಣವೇನೆಂದು ವಿಚಾರಿಸಿದಳು. 'ಪೋದಿರುಳೊಳ್ ಪೊಂದಾವರೆಗೊಳದಂಚೆ ಕಟಿಲ್ದಾವರೆಗೊಳದೊಳಗೆ ನಲಿವ ಕನಸಂ ಕಂಡೆನ್' ಎಂದು ಪತ್ನಿಯ ಅನಾಚಾರವನ್ನು ಕನಸಿನ ರೂಪದಲ್ಲಿ ತಾಯಿಗೆ ತಿಳಿಸಿದ. ಮಗನ ಭವಿಷ್ಯದ ಕುರಿತು ಚಿಂತಿತಳಾದ ಚಂದ್ರಮತಿ ಪ್ರಾಯಶ್ಚಿತ್ತಕ್ಕಾಗಿ ಕುರಿಯನ್ನು ಬಲಿಗೊಡಬೇಕೆಂದಳು. ಯಶೋಧರ ಒಪ್ಪಲಿಲ್ಲ. ಕೊನೆಗೆ ಮಾತೃಪ್ರೇಮಕ್ಕೆ ಕಟ್ಟುಬಿದ್ದು ಹಿಟ್ಟಿನ ಕೋಳಿಯನ್ನು ಬಲಿಗೊಡಲು ಒಪ್ಪಿದ. ಹಿಟ್ಟಿನ ಕೋಳಿಯನ್ನು ಬಲಿಕೊಡುವ ಸಂದರ್ಭದಲ್ಲಿ ಅದರಲ್ಲಿ ಸೇರಿಕೊಂಡಿದ್ದ ಬೆಂತರವೊಂದು ಕೋಳಿಯಂತೆ ಕೂಗಿತು. ವಿಧಿಯ ವಿಲಾಸವನ್ನು ಅರಿಯಲು ಯಾರಿಗೆ ಸಾಧ್ಯ?

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನಮಾಯ್ತು ಚಂದ್ರಮತಿ ಮಾತೆಯ ಮಾ
ತೆಮಗೆ ಬಲೆಯಾಯ್ತು ಹಿಂಸನ
ಮೋಘ ಶರಮಾಯ್ತು ಕೆಡೆದುದು ಆತ್ಮಕುರಂಗಂ
(ಯಶೋಧರ ಚರಿತೆ, 3–28)

ಮಾಡಿದ ಸಂಕಲ್ಪ ಹಿಂಸೆ ಕಾರಣವಾಗಿ ಯಶೋಧರ ಚಂದ್ರಮತಿಯರು ಆರು ಜನ್ಮಗಳಲ್ಲಿ ನಾಯಿ ನವಿಲು, ಹಾವು ಹಂದಿ, ಮೀನು ಮೊಸಳೆ, ಆಡು ಹೋತ, ಕೋಣ ಹೋತ, ಕೋಳಿಪಿಳ್ಳೆಗಳಾಗಿ ಹುಟ್ಟಿದರು. ಏಳನೇ ಜನ್ಮದಲ್ಲಿ ಯಶೋಮತಿ ಮತ್ತು ಕುಸುಮಾವಳಿ ದಂಪತಿಗಳಿಗೆ ಅಭಯರುಚಿ ಮತ್ತು ಅಭಯಮತಿಗಳೆಂಬ ಅವಳಿ ಮಕ್ಕಳಾಗಿ ಹುಟ್ಟಿದರು. ಕಡು ಪಾತಕಿಯಾದ ಅಮೃತಮತಿ ಕುಷ್ಠರೋಗಿಯಾಗಿ ನರಳಿ ಸತ್ತು ಧೂಮಪ್ರಭೆಯೆಂಬ ಪಂಚಮ ನರಕವನ್ನು ಸೇರಿದಳು. 'ಮನುಷ್ಯ ಸ್ವಭಾವ, ವಿಧಿಯ ವಿಲಾಸ, ಧರ್ಮತತ್ವ ಇವೆಲ್ಲಕ್ಕೂ ಸರಿಹೋಗುವಂತೆ ಯಶೋಧರ ಚರಿತೆಯಲ್ಲಿ ಜನ್ನನು ಉಜ್ವಲವಾದ ರೀತಿಯಲ್ಲಿ ಪ್ರಣಯ ಸಮಸ್ಯೆಯೊಂದನ್ನು ಚಿತ್ರಿಸಿ ಹಿಂಸೆ–ಅಹಿಂಸೆಗಳ ಪರಿಣಾಮವನ್ನು ನಿರೂಪಿಸಿದ್ದಾನೆ, ಕಾಂತಾಸಂಮಿತಿಯಿಂದ ಉಪದೇಶ ಮಾಡಿದ್ದಾನೆ' (ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಪು.187) ಎಂಬ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕಾಗಿದೆ.

ಅಮೃತಮತಿಯ ಅನೈತಿಕ ನಡೆವಳಿಕೆಗೆ ಕಾರಣವಾದರೂ ಏನು? ಇದು ವಿದ್ವಾಂಸರ ಜಿಜ್ಞಾಸೆಗೆ ಕಾರಣವಾದ ಪ್ರಶ್ನೆ. 'ಮನಸಿಜನ ಮಾಯೆ ವಿಧಿ ವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬುದು ಕವಿಯ ನಿಲುವು. ಕವಿಯ ಮೌನ ಇಲ್ಲಿಯೂ ನಮ್ಮನ್ನು ಗಹನವಾದ ಜಿಜ್ಞಾಸೆಗೆ ಪ್ರೇರೇಪಿಸುತ್ತದೆ. 'ಸಂಕಲ್ಪ ಹಿಂಸೆ ತೃಪ್ತಿಗೊಳ್ಳಲಾರದ ಹಿಂಸೆಯನ್ನು ಬದುಕಿಸುತ್ತದೆ. ಯಶೋಧರ ತನ್ನ ಮನಸ್ಸಿನೊಳಗಿನ ಹಿಂಸೆಯನ್ನು ಅಡಗಿಸಿಟ್ಟುಕೊಂಡ ಖಡ್ಗದಲ್ಲಿ, ನೆಯ್ದಿಲ ಹೂವಿನ ಹೊಡೆತದಲ್ಲಿ ಮುಚ್ಚಿಟ್ಟುಕೊಂಡಿದ್ದಾನೆ. ವಾಸ್ತವದಲ್ಲಿ ಮುಚ್ಚಿಟ್ಟುಕೊಂಡದ್ದು ಪ್ರತೀಕದಲ್ಲಿ ಬಯಲಾಗುತ್ತದೆ. ಸುಖವೇ ಆಗಲಿ, ದು:ಖವೇ ಆಗಲಿ, ಅನುಭವಿಸಿ ತೀರಿಸಲೇ ಬೇಕು. ಇಲ್ಲದಿದ್ದರೆ ಕೂಗಿ ಕರೆವ ದುರಿತಗಳು ತಮ್ಮ ಲೆಕ್ಕ ತೀರಿಸಲು ಕಾಡುತ್ತವೆ.' (ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ, ಪು.197) ಎಂಬ ಅಭಿಪ್ರಾಯವು ಹಿಂಸೆಯ ಸ್ವರೂಪವನ್ನು ಹೊಸ ದೃಷ್ಟಿಕೋನದಿಂದ ವ್ಯಾಖ್ಯಾನಿಸುತ್ತದೆ.

**ಚಂಡಶಾಸನ ಮತ್ತು ಸುನಂದೆ**

ಚಂಡಶಾಸನನ ಪ್ರಸಂಗ ಜನ್ನನು ರಚಿಸಿರುವ 'ಅನಂತನಾಥ ಪುರಾಣ'ದ ಒಂದು ಉಪಕಥೆಯಾಗಿ ಬರುತ್ತದೆ. ಒಂದು ದೃಷ್ಟಿಯಿಂದ ನೋಡಿದರೆ ಅನಂತನಾಥ ಪುರಾಣಕ್ಕೂ ಈ ಕಥೆಗೂ ನೇರವಾದ ಯಾವುದೇ ಸಂಬಂಧವಿಲ್ಲ. ಆದರೂ ಜನ್ನ ವಿಷಮ ಪ್ರಣಯದ ಪುರುಷ ಮುಖವನ್ನು ಚಿತ್ರಿಸಲು ಈ ಕಥೆಯನ್ನು ಸಮರ್ಥವಾಗಿ ಬಳಸಿದ್ದಾನೆ.

ಭರತ ವರ್ಷದ ತೆಂಕು ದಿಕ್ಕಿನಲ್ಲಿ ಸುರಮ್ಯವೆಂಬ ದೇಶ. ಅದರ ರಾಜಧಾನಿ ಪೌದನಪುರ. ಅಲ್ಲಿನ ದೊರೆ ವಸುಷೇಣ, ಅವನ ಪತ್ನಿ ಸುನಂದೆ. ಒಂದು ದಿವಸ ವಸುಷೇಣನು ಕುದುರೆ ಏರಾಟದ ವಿನೋದದಲ್ಲಿದ್ದಾಗ, ಸುದರ್ಶನನೆಂಬವನು ಬಂದು 'ಸಹಪಾಂಸು ಕ್ರೀಡಾನುಸಂಗತಬಂಧು' ಮಕರಗ್ರಾಹಪುರದ ದೊರೆ ಚಂಡಶಾಸನ ಆಗಮಿಸಿದ್ದಾನೆ ಎಂದು ತಿಳಿಸಿದ. ಗೆಳೆಯನ ಆಗಮನ ವಾರ್ತೆಯಿಂದ ವಸುಷೇಣನಿಗೆ ಆನಂದವಾಯಿತು. ಮಿತ್ರರಿಬ್ಬರೂ ಪೌದನಪುರದಲ್ಲಿ ಸಹಪಂಕ್ತಿಭೋಜನ, ಸಹವಿಳಾಸಕ್ರೀಡೆಗಳಿಂದ ಸುಖಿಸುತ್ತಿದ್ದರು.

ಒಂದು ದಿವಸ 'ಕಾಮದೇವನ ಕರವಾಳ'ದಂತಿದ್ದ ಸುನಂದೆಯ ಸೌಂದರ್ಯವು ಚಂಡಶಾಸನನ ಮನಸ್ಸನ್ನು ಸೂರೆಗೊಂಡಿತು. ಗೆಳೆಯನ ಪಕ್ಕದಲ್ಲಿ ಕುಳಿತು ಪಂಕ್ತಿಭೋಜನವನ್ನು ಸವಿಯುತ್ತಿದ್ದ ಚಂಡಶಾಸನನಿಗೆ ವಿಲಾಸದಿಂದ ಬಡಿಸುತ್ತಿದ್ದ ಸುನಂದೆಯ ತೋಳಮೂಲದ ಕಾಂತಿ, ಮಣಿಬಂಧದ ಚೆಲುವು, ಕೋಮಲ ಕೈಬೆರಳುಗಳ ಕೊಂಕು ಹುಚ್ಚು ಹಿಡಿಸಿತು. ಆತ ಅನಂಗ ಜ್ವರದಿಂದ ಬಳಲಿದ. ತನ್ನ ಅವಸ್ಥೆಯನ್ನು ಚಂಡಶಾಸನನು ಗೆಳೆಯ ಸುದರ್ಶನನಿಗೆ ಅರುಹಿ 'ಈ ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ' ಎಂದು ಹಲುಬಿದ. ಸುದರ್ಶನ ಗೆಳೆಯನಾಗಿ ಅವನ ತಪ್ಪನ್ನು ತಿದ್ದುವುದರ ಬದಲು ಅವನನ್ನು ಪ್ರೋತ್ಸಾಹಿಸಿದ. 'ಅವಳಿಗೂ ನಿನ್ನ ಮೇಲೆ ಮೋಹ ಉಂಟಾಗಿದೆ. ಆರೋಗಣೆಯ ಬಳಿಕ ನೀವಿಬ್ಬರೂ ಹಂಸತೂಲಿಕಾತಲ್ಪದಲ್ಲಿ ಕುಳಿತಿರಬೇಕಾದರೆ ದೂರದಿಂದ ಅವಳು ನಿನ್ನನ್ನು ಪ್ರೇಮಭಾವದಿಂದ ನೋಡುತ್ತಿದ್ದಳು' ಎಂದು ಚಂಡಶಾಸನನ 'ಮನದ ಪಿಶಾಚಕ್ಕೆ ವಚನ ರಚನಾಧೂಪ'ವನ್ನು ತೋರಿದ. ಅಷ್ಟಕ್ಕೂ ಬಿಡದೆ 'ಸುನಂದೆಯನ್ನು ನಿನ್ನೊಡನೆ ಕೂಡಿಸುತ್ತೇನೆ' ಎಂದು ಭರವಸೆಯನ್ನು ಕೊಟ್ಟ.

ಹೀಗಿರುವಾಗ ಒಂದು ದಿವಸ ಬೇಡಪಡೆಯ ನಾಯಕ ಬಂದು ವಸುಷೇಣನಿಗೆ ಮೃಗಬೇಟೆಯನ್ನು ನೋಡಲು ಕಾಡಿಗೆ ಬರುವಂತೆ ಆಹ್ವಾನಿಸಿದ. ರಾಜ ತನ್ನ ಗೆಳೆಯ ಚಂಡಶಾಸನನೊಡನೆ ಮಿತಪರಿವಾರದೊಂದಿಗೆ ಕಾಡಿನಲ್ಲಿ ಬೇಟೆಯ ವಿನೋದಗಳನ್ನು ಆನಂದಿಸಿದ. ಮಧ್ಯಾಹ್ನದ ಹೊತ್ತಿಗೆ ಬೋನವನ್ನು ಕಾಡಿಗೆ ತರುವಂತೆ ಅರಸಿಗೆ ಹೇಳೆಂದು ವಸುಷೇಣ ಅರಮನೆಗೆ ದೂತರನ್ನಟ್ಟಿದ. ಇದೇ ಹೊತ್ತಿಗೆ ಬೇಟೆಯಾಡುತ್ತ ವಸುಷೇಣ ಮತ್ತು ಚಂಡಶಾಸನರು ಕಾಡಿನಲ್ಲಿ ಬೇರ್ಪಟ್ಟರು. ಚಂಡಶಾಸನ ಸುನಂದೆ ಬೋನವನ್ನು ತರುವ ದಾರಿಯಲ್ಲೇ ಹೊಂಚು ಹಾಕುತ್ತ ಕಾದಿದ್ದು, 'ಪರಿಮಿತಾಂಗರಕ್ಷಕಪರೀತೆಯಾಗಿ' ನಡೆದು ಬರುತ್ತಿದ್ದ ಅವಳನ್ನು ಬಲಾತ್ಕಾರದಿಂದ ಎತ್ತಿ ರಥದಲ್ಲಿ ಕುಳ್ಳಿರಿಸಿಕೊಂಡು ಮನೋವೇಗದಿಂದ ಹೊರಟ. ಸುನಂದೆ ಚಂಡಶಾಸನನನ್ನು ಮಿತ್ರಘಾತುಕನೆಂದು ತಿಳಿದಿರಲಿಲ್ಲ. ಅವಳು ತನ್ನ ಬಸಿರನ್ನು ಮೋದಿಕೊಂಡು ಹುಯ್ಯಲಿಟ್ಟಳು. 'ಗಂಡರ ಪಿಂದೆ ಕಳ್ವುದು ಅರಿದೇ ಸ್ತ್ರೀ ಬಾಲೆಯಂ? ಬೂತೆ ಪಾಟ್ಸೆನೆಯೊಳ್ ನಾಯ್ ಘೃತಭಾಂಡಮಂ ತೆಗೆವವೊಲ್ ಕಳ್ದೊಯ್ಯುವುದು ಆಳ್ ಪಾಟಿಯೇ' ಎಂದು ಅವನನ್ನು ನಿಂದಿಸಿದಳು.

ಸುರಮ್ಯ ದೇಶದ ಗಡಿಭಾಗವನ್ನು ಕಾಯುತ್ತಿದ್ದ ಸಿಂಹಚೂಡನೆಂಬ ಸಾಮಂತ ಚೂಡಾಮಣಿಗೆ ಸುನಂದೆಯ ಗೋಳು ಕೇಳಿಸಿತು. ಜಿಂಕೆಯನ್ನು ಕೊಂಡೊಯ್ಯುವ ಹುಲಿಯಂತೆ ಸುನಂದೆಯನ್ನು ಕೊಂಡೊಯ್ವ ಚಂಡಶಾಸನನನ್ನು ಕಂಡು ಗಜರಿ ಗರ್ಜಿಸಿ ಅವನ ರಥವನ್ನು ತಡೆದು ತರುಬಿದ. ಚಂಡಶಾಸನ ಕತ್ತಿಯನ್ನು ಸೆಳೆದು 'ವಾನರನೇಂ ಸೆಳೆವುದೆ ಪೇರಾನೆಯ ಕೆಯ್ವಿಡಿದ ಕರ್ಬನ್' ಎನ್ನುತ್ತ ಎದುರಿಸಿದ. ಭೀಕರ ಯುದ್ಧ ನಡೆಯಿತು. ಕಡೆಗೆ ಚಂಡಶಾಸನನು ಸಿಂಹಚೂಡನನ್ನು ಕತ್ತಿಯಿಂದ ಪೊಯ್ದು ರಥವೇರಿ ಕ್ಷಣ ಮಾತ್ರದಲ್ಲಿ ತನ್ನ ದುರ್ಗವನ್ನು ಸೇರಿಕೊಂಡನು.

ಇತ್ತ ಉದ್ಯಾನವನದಲ್ಲಿ ಸುನಂದೆ ಬರುವುದು ಯಾಕೆ ತಡವಾಯಿತು ಎಂದು ಚಿಂತಿಸುತ್ತ ವಸುಷೇಣನು ತವಕಗೊಳ್ಳುತ್ತಿದ್ದನು. ಅಷ್ಟರಲ್ಲಿ ದು:ಖಿತರಾಗಿ ಓಡೋಡಿ ಬಂದ ಪರಿಜನರು ಸುನಂದೆಯನ್ನು ಚಂಡಶಾಸನನು ಸೆರೆ ಹಿಡಿದುಕೊಂಡು ಹೋದನೆಂದು ಹೇಳಿದರು. ಅರಸ ಕೋಪ ಮತ್ತು ದು:ಖಗಳಿಂದ ಮೂರ್ಛಿತನಾದ. ಸಚಿವರು ಅವನನ್ನು ಉಪಚರಿಸಿ ಎಚ್ಚರಿಸಿದರು. 'ಅಹಿತ ಪ್ರಾಣಾನಿಲನಿಂದ ಎನ್ನ ಕೃಪಾಣಾಹಿಯನ್ ಊಡಿ ಬಳಿಕ ಆನ್ ಉಂಡಪ್ಪೆಂ' ಎಂದು ಪ್ರತಿಜ್ಞೆಯನ್ನು ಮಾಡಿ ಅವನು ಯುದ್ಧಕೆ ಸಿದ್ಧನಾದ.

ಸುನಂದೆಯನ್ನು ಹುಡುಕುತ್ತ ಸಾಗುವ ದಾರಿಯಲ್ಲಿ ಸಾಮಂತ ಸಿಂಹಚೂಡನ ಪಂದಲೆ ಸಿಕ್ಕಿತು. ಸಿಂಹಚೂಡನ ಹೋರಾಟ ವ್ಯರ್ಥವಾದುದು ಅವನಿಗೆ ತಿಳಿಯಿತು. ಅಲ್ಲಿ ರಾತ್ರಿಯನ್ನು ಕಳೆದು ಮರುದಿವಸ ಚಂಡಶಾಸನನ ದುರ್ಗದತ್ತ ಸಾಗಿದ.

ಅತ್ತ ಮಕರಗ್ರಾಹಪುರದಲ್ಲಿ ಚಂಡಶಾಸನನ ಪ್ರಜೆಗಳು 'ಪರವೆಣ್ಣಂ ತಂದನೋ, ತಂದನೋ ಪೆಸರ್ಗಿಡೆ ಪೆರ್ಮಾರಿಯಂ ನಮ್ಮ ದುರ್ಗಕ್ಕರಸಂ' ಎಂದು ಚಿಂತಿಸಿ ಭಯಾಕ್ರಾಂತರಾದರು. ಯುದ್ಧ ಆರಂಭವಾಯಿತು. ಮೊದಲ ದಿವಸದ ಯುದ್ಧ ಮುಗಿಸಿ ಸುನಂದೆಯ ಅಂತ:ಪುರಕ್ಕೆ ಬಂದ ಚಂಡಶಾಸನ,

ನಯದಿಂ ನಿನ್ನೊಳೊಡಂಬಡಂ ಪಡೆಯದಿಂದೌತ್ಸುಕ್ಯದಿಂ ತಂದ ಸ
ಲ್ಗೆಯ ನೀಂ ಮನ್ನಿಸು ಕಾಮಿ ಕಣ್ಣರಿವನಲ್ತಾಂ ಗಂಡುದೊಟ್ಟಿನ್ನ ರಾ
ಣಿಯ ವಾಸಂ ಪರಿಚಾರಕಾಳಿ ನಿನಗೀ ಸಾಮ್ರಾಜ್ಯಲಕ್ಷ್ಮೀಸುಖೋ
ದಯದೊಳ್ವಲ್ಲಭೆಯಗಿ ನೀನಿರು ದಲನ್ನೀಲಾಬ್ಜಲೋಲೇಕ್ಷಣೇ
(ಅನಂತನಾಥ ಪುರಾಣ, 11–88)

ಎಂದು ಬೇಡಿಕೊಂಡನು. ಸುನಂದೆ ಕನಲಿ 'ಪಾಣ್ಬ, ನಿನ್ನ ತಲೆಯುಂ ಕಾರಾಗೃಹದ್ವಾರದೊಳ್ ಮೆಟ್ಟಿವಾಗಳ್ ನುಡಿ ನಾಳೆ ನೀನೆನಗೆ ಮಾಡಲ್ವೇಟ್ದ ಸತ್ಕಾರಮಂ' ಎಂದು ಜರೆದಳು. ಚಂಡಶಾಸನ ಸುನಂದೆಯ ಮನವೊಲಿಸಲು ಬಗೆಬಗೆಯಾಗಿ ಪ್ರಯತ್ನಿಸಿದ. ಆದರೆ ಸುನಂದೆ ಅವನ ಮಾತಿಗೆ ಜಗ್ಗಲಿಲ್ಲ. 'ಮಾವಿನ ಕೊಂಬಿನೊಳ್ನಲಿದು ನರ್ತಿಪ ಕೋಗಿಲೆ ಪತ್ತಿದಂಟಿನಿಂ ಬೇವಿನ ಕೊಂಬಿನೊಳ್ ನಲಿವುದೇ' ಎಂದು ಪ್ರಶ್ನಿಸಿದ ಅವಳು 'ವಸುಷೇಣ ನೃಪನೆ ಕೈವಿಡಿದಸುವಿಂಗೊಡೆಯಂ ಚಿತಾಗ್ನಿಗೊಡೆಯಂ' ಎಂದು ದೃಢವಾಗಿ ನುಡಿದಳು. ಆಗ ಚಂಡಶಾಸನನು 'ಬಿಡೆ ನಾಂ ನೀ ಸಾಯೆ ಸಾವೆನ್, ಅಲ್ಲದುಟಿಯೆಂ, ನೀನೊಲ್ದೊಡೇನ್ ಒಲ್ಲದಿರ್ದೊಡೇನ್, ಆನೆರಡಿಲ್ಲದೆ ಒಲ್ದೆನ್, ಬೇಱಾರ ಬೇಟಕ್ಕೆ ಬಾಯ್ಬಿಡಲಾಱೆಂ, ಸೆರೆಯಿಂದಮೆನ್ನ ಮನೆಯೊಳ್ನೀನಿರ್ದೆಯೆಂಬಾಸೆಯುಳ್ಳೊಡೆ ಸಾಲ್ಗುಂ' ಎಂದು ತನ್ನ ಉತ್ಕಟವಾದ ಪ್ರೇಮವನ್ನು ಅರುಹಿ ಹೋಗುತ್ತಾನೆ. ಮರುದಿವಸ ಬೆಳಗ್ಗೆ ಚಂಡಶಾಸನ ಒಂದು ಕೈತವವನ್ನು ನೆನೆದ. ಇಂದ್ರಜಾಲಿಗನಿಂದ ವಸುಷೇಣನ ಶಿರವನ್ನು ಮಾಡಿಸಿ, ಆ ಮಾಯದ ಶಿರವನ್ನು ಸುನಂದೆಯ ಮುಂದೆ ಈಡಾಡಿಸಿದ. ಅದನ್ನು ಕಂಡೊಡನೆ 'ಹೃದಯದೊಳಿರ್ದ ವಲ್ಲಭನನಾಕ್ಷಣ ಭೀತಿಯನೀಕ್ಷಿಪಂತೆ' ಅವಳ ಕಣ್ಣುಗಳು ಮುಚ್ಚಿದುವು. ಅವಳ ಪ್ರಾಣಪಕ್ಷಿ ಹಾರಿ ಹೋಯಿತು.

ಇದನ್ನು ಕಂಡು ಚಂಡಶಾಸನನಿಗೆ ದು:ಖವಾಯಿತು. ತಾನೊಂದು ಬಗೆದರೆ ವಿಧಿ ಮನ್ಮಥನೊಡನೆ ಸೇರಿಕೊಂಡು ತನ್ನನ್ನು ಹಾಳು ಮಾಡಿದನೆಂದು ಅವನು ಮೂರ್ಛೆ ಹೋದನು. ಎಚ್ಚೆತ್ತ ಮೇಲೆ ಸುನಂದೆಯೊಡನೆ ತಾನೂ ಸಾಯುವೆನೆಂದು ನಿರ್ಧರಿಸಿದನು. 'ಅಬ್ಜದಳಲೋಚನೆ, ಮರುಮೆಯ್ಯಳಾದೊಡಂ ಕೂಡದೆ ಮಾಣೆನ್ ನಿನ್ನೊಡನೆ' ಎಂದು ನಿರ್ಧರಿಸಿ ಅವಳೊಡನೆ ತಾನೂ ಚಿತಾಗ್ನಿಯನ್ನು ಪ್ರವೇಶಿಸಿದ. 'ಮಾವಿಂಗೆ ಮಲ್ಲಿಗೆಗಳ್ ಕೂರ್ತೊಡೆ ಮಾವು ಕೂರ್ತುದು ವಸಂತಶ್ರೀಗೆ' ಎಂದು ಅವನ ಅಂತ:ಪುರದ ಸ್ತ್ರೀಯರು ದು:ಖಿಸಿದರು. ಸುನಂದೆಯ ಸಾವಿನ ಸುದ್ದಿಯನ್ನು ತಿಳಿದ ವಸುಷೇಣ,

ಆನಟಿದೆನೆಂದು ಪುಸಿದೊಡೆ
ಮಾನಿನಿ ನೀಂ ಕಟಿದೆ ನಿನ್ನ ಸಾವನೆ ಕಂಡಿಂ
ತಾನುಟಿದೆಂ ನಿರ್ಲಜ್ಜರ್
ದೀನರ್ ಕೃಪಣರ್ ಕೃತಘ್ನರಾರೆನ್ನಿಂದಂ
(ಅನಂತನಾಥ ಪುರಾಣ, 12–23)

ಎಂದು ದು:ಖಿಸಿದ. ಯುದ್ಧವನ್ನು ನಿಲ್ಲಿಸಿ ವೈರಾಗ್ಯಪರನಾಗಿ ತನ್ನ ರಾಜ್ಯಕ್ಕೆ ಹಿಂದಿರುಗಿದ. ಮಗನಿಗೆ ರಾಜ್ಯವನ್ನು ವಹಿಸಿ ತಪಸ್ಸಿಗೆ ತೆರಳಿದ.

ಮನುಷ್ಯ ಮನಸ್ಸಿನಲ್ಲಿ ಹುಟ್ಟಿಕೊಳ್ಳುವ ಬಯಕೆಗಳಿಗೆ ಕಾಮ ಎಂದು ಹೆಸರು. ಕಾಮ ಮನುಷ್ಯನ ಸಹಜ ಪ್ರವೃತ್ತಿಯಾಗಿದೆ. ಮಾನವನ ಮನಸ್ಸು ಯಾವುದನ್ನು ಯಾವಾಗ ಬಯಸುತ್ತದೆ ಎಂಬುದನ್ನು ಊಹಿಸಲು ಅಸಾಧ್ಯ. ಒಂದು ಬಯಕೆ ಹುಟ್ಟಿದರೆ ದೇಹ ಮತ್ತು ಮನಸ್ಸು ಅದನ್ನು ಈಡೇರಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಸಮಾಜ ಜೀವಿಯಾದ ಮನುಷ್ಯ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಧರ್ಮ ಮತ್ತು ನೀತಿಯ ಕಟ್ಟುಪಾಡುಗಳನ್ನು ತನಗೆ ತಾನು ವಿಧಿಸಿಕೊಂಡಿದ್ದಾನೆ. ಹೀಗಾಗಿ ದೈಹಿಕ ಕಾಮನೆಗಳನ್ನು ಪೂರೈಸಿಕೊಳ್ಳಲು ಸುಸಂಸ್ಕೃತ ಸಮಾಜದಲ್ಲಿ ವಿವಾಹ ಸಂಬಂಧಗಳ ಚೌಕಟ್ಟನ್ನು ಏರ್ಪಡಿಸಲಾಗಿದೆ. ಆದರೆ ಚಂಚಲವಾದ ಮನಸ್ಸು ಧರ್ಮದ ಚೌಕಟ್ಟನ್ನು ಮೀರಿ ಸುಖವನ್ನು ಅರಸುತ್ತದೆ. ಇಂತಹ ಧರ್ಮಬಾಹಿರ ಕಾಮವು ದುರಂತಕ್ಕೆ ಕಾರಣವಾಗುತ್ತದೆ. ಜನ್ನನ ಎರಡು ಕಾವ್ಯಗಳಲ್ಲಿ ಚಿತ್ರಿತವಾಗಿರುವ ಎರಡು ಪ್ರಣಯ ಪ್ರಸಂಗಗಳು ಧರ್ಮಬಾಹಿರ ಕಾಮದ ಪರಿಣಾಮವನ್ನು ಸಮರ್ಥವಾಗಿ ಚಿತ್ರಿಸಿದೆ. 'ಜನ್ನನ ಯಶೋಧರ ಚರಿತೆ ಮತ್ತು ಚಂಡಶಾಸನ ಕಥೆ– ಇವು ಕನ್ನಡ ವಾಙ್ಮಯದಲ್ಲಿ ವಿಶಿಷ್ಟ ಕೃತಿಗಳು. ಕವಿ ಸಾಂಪ್ರದಾಯಿಕವಾದ ಮತ್ತು ಚಿರಪರಿಚಿತವಾದ ವಸ್ತುವನ್ನು ಬಿಟ್ಟು, ಅಪಾತ್ರ ಪ್ರಣಯದ ಎರಡು ದಿಕ್ಕುಗಳನ್ನು ನಿರೂಪಿಸಿ, ಬದುಕಿನ ವಾಸ್ತವಿಕತೆಗೆ ಕನ್ನಡಿ ಹಿಡಿದಿದ್ದಾನೆ' (ಜನ್ನ ಸಂಪುಟ, (ಸಂ.) ಪ್ರೊ.ಸಿ.ಪಿ.ಕೃಷ್ಣಕುಮಾರ್, ಪು.47) ಎಂಬ ಮಾತು ಈ ಹಿನ್ನೆಲೆಯಲ್ಲಿ ಒಪ್ಪತಕ್ಕದ್ದಾಗಿದೆ.

ಜನ್ನ ನಿರೂಪಿಸಿದ ಎರಡು ಪ್ರಣಯ ಪ್ರಸಂಗಗಳನ್ನು ಹೋಲಿಸಿದರೆ ಕಥಾವಸ್ತುವಿನ ಆಯ್ಕೆಯಲ್ಲಿ ಸಾದೃಶ್ಯವಿರುವುದು ಕಂಡುಬರುತ್ತದೆ. ಯಶೋಧರ ಚರಿತೆಯಲ್ಲಿ ಹೆಣ್ಣಿನಿಂದ ಗಂಡಿಗೆ ಅನ್ಯಾಯವಾಗಿದೆ. ಚಂಡಶಾಸನ ಪ್ರಸಂಗದಲ್ಲಿ ಗಂಡಿನಿಂದ ಹೆಣ್ಣಿಗೆ ಅನ್ಯಾಯವಾಗಿದೆ. ಧರ್ಮದ ದೃಷ್ಟಿಯಲ್ಲಿ ಇಬ್ಬರದೂ ಲೋಕನಿಂದ್ಯವಾದ, ಅಕ್ರಮವೆನಿಸಿದ ಪ್ರಣಯಗಳಾಗಿವೆ. ಯಶೋಧರನ ಪತ್ನಿ ಅಮೃತಮತಿ ಒಂದಿರುಳು ಮಾವಟಿಗನ ಹಾಡಿಗೆ ಮನಸೋತು ತನ್ನ ಗಂಡನಿಗೆ ದ್ರೋಹವೆಸಗಿ ಬೇರೊಬ್ಬನನ್ನು ಕೂಡಿದಳು. ವಸುಷೇಣನ ಗೆಳೆಯನಾಗಿ, ಅತಿಥಿಯಾಗಿ ಬಂದ ಚಂಡಶಾಸನ ಅವನ ಹೆಂಡತಿಯ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಅಪಹರಿಸಿದ; ಮಿತ್ರನಿಗೆ ದ್ರೋಹವೆಸಗಿದ. ಇಬ್ಬರದೂ ಧರ್ಮದ ದೃಷ್ಟಿಯಿಂದ ಅಕ್ಷಮ್ಯ ಅಪರಾಧಗಳಾಗಿವೆ. ಕಾವ್ಯದೃಷ್ಟಿಯಿಂದ ಈ ಎರಡು ಪ್ರಣಯ ಪ್ರಸಂಗಗಳೇ ಎರಡು ಕಾವ್ಯಗಳ ಕೇಂದ್ರದಲ್ಲಿವೆ. ವಿಧಿ ವಿಳಸನ ಮತ್ತು ಮನಸಿಜನ ಮಾಯೆಯ ಪ್ರಸ್ತಾಪವಿದ್ದರೂ ಪ್ರಣಯ ವಿಷಯದಲ್ಲಿ ಕವಿ ತಾಳಿರುವ ಮೌನವು ಅನೇಕ ಜಿಜ್ಞಾಸೆಗಳಿಗೆ ಕಾರಣವಾಗಿದೆ.

## ಪರಾಮರ್ಶನ ಗ್ರಂಥಸೂಚಿ


1. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಗೀತಾ ಬುಕ್ ಹೌಸ್, ಮೈಸೂರು, 2014
2. ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, 2010
3. ಜನ್ನ ಸಂಪುಟ, (ಸಂ.) ಪ್ರೊ.ಸಿ.ಪಿ.ಕೃಷ್ಣಕುಮಾರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007